## ಮೂಢನಂಬಿಕೆಯ ವೈಭವೀಕರಣ!

ನಾವಿಂದು ಜಾಗತೀಕರಣದ ವರ್ತುಲದಲ್ಲಿ ಎಲ್ಲ ರಂಗಗಳಲ್ಲೂ ಸ್ಪರ್ಧೆ ಮಾಡಬೇಕಾದದ್ದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ನಾವೆಲ್ಲ ಮಾಟ, ಮಂತ್ರ, ತಾಯಿತ, ದೆವ್ವ, ಭೂತಗಳ ಕಲ್ಪನೆಯಿಂದ ಹೊರಬರಬೇಕಾಗಿದೆ.

ಆದರೆ ದುರಂತ ಎಂಬಂತೆ 'ಸುವರ್ಣ' ದೃಶ್ಯ ಮಾಧ್ಯಮದಲ್ಲಿ ಸಂಜೆ 7 ರಿಂದ 7-30 ರವರೆಗೆ ಪ್ರಸಾರವಾಗುವ 'ದುರ್ಗಾ' ಧಾರಾವಾಹಿಯಲ್ಲಿ ತಾಯಿತ, ಮಾಟ ಇಂತಹ ಮೂಢ ನಂಬಿಕೆಗಳನ್ನು ವೈಭವೀಕರಿಸಲಾಗಿದೆ. 'ಇರಲಿ ಬಿಡಿ. ಇದು ಧಾರಾವಾಹಿ ಅಲ್ಲವೆ' ಎಂದು ಸುಮ್ಮನಿರುವುದು ಸರಿಯಲ್ಲ ಎನಿಸುತ್ತದೆ.

-ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಅವಮಾನ ಬೇಡ

ಧಾರಾವಾಹಿಗಳಲ್ಲಿ ಇತ್ತೀಚೆಗೆ ನಿರ್ದಿಷ್ಟ ವಿಷಯಗಳನ್ನು ಹೈಲೈಟ್ ಮಾಡಿ ಅವಮಾನಿಸುವುದು ಹೆಚ್ಚಾಗುತ್ತಿದೆ. ನಿರ್ದಿಷ್ಟ ಜಾತಿ, ಧರ್ಮ, ಭಾಷೆ ಎಲ್ಲವನ್ನೂ ಗುರಿಯಾಗಿಸುತ್ತಿರುವುದು ನೋವಿನ ಸಂಗತಿಯಾಗಿದೆ. ನಮ್ಮ ಸಂಸ್ಕೃತಿ– ಸೊಗಡು, ಭಾಷಾ ವೈಶಿಷ್ಟ್ಯವನ್ನು ಎತ್ತಿಹಿಡಿದು ಗೌರವ ಮೂಡಿಸಬೇಕಾದ ಚಾನೆಲ್‌ಗಳು ಹೀಗೆ ಮಾಡುತ್ತಿರುವುದು ನಿಜಕ್ಕೂ ದುರಂತವೇ ಸರಿ. ಕೆಲವು ಕಾರ್ಯಕ್ರಮಗಳಲ್ಲಂತೂ ಹಾಸ್ಯಕ್ಕೆ ಅಪಹಾಸ್ಯ ಮಾಡಿ ಅವಮಾನ ಮಾಡುವುದು ದಿನೇ ದಿನೇ ಮುಂದುವರೆಯುತ್ತಿದೆ. ದಯಮಾಡಿ ಚಾನೆಲ್‌ಗಳು ಇದನ್ನು ನಿಲ್ಲಿಸಿ ಸರಿಯಾಗಿ ಕಾರ್ಯಕ್ರಮ ನಡೆಸಲಿ. ಹಾಸ್ಯಕ್ಕೆ ವಿಷಯದ ಕೊರತೆಯಿಲ್ಲ. ಅದನ್ನು ಹೆಕ್ಕಿ ಜೀವ ಕೊಟ್ಟರೆ ಸಾಕು. ಅದನ್ನು ಬಿಟ್ಟು ಯಾಕೆ ಹೀಗೆ ಮಾಡುತ್ತಾರೋ? ದಯಮಾಡಿ ಈ ರೀತಿ ಮಾಡದಿರಿ.

–ಡಾ.ಕೆ.ವಿ.ಸಂತೋಷ್ ಹೊಳಲ್ಕೆರೆ, ಚಿತ್ರದುರ್ಗ

ವಾರದ ಪತ್ರ

## ಪ್ರಾದೇಶಿಕ v/s ರಾಷ್ಟ್ರೀಯ ವಾಹಿನಿ

ರಾಷ್ಟ್ರೀಯ ಸುದ್ದಿವಾಹಿನಿಗಳು ತಾವೇ ಮೊದಲು ಮತ್ತು ತಾವೊಬ್ಬರೇ ಎಂದು ಸದಾ ತಮ್ಮ ಕಾರ್ಯಕ್ರಮದಲ್ಲಿ ಅವಕಾಶ ದೊರಕಿದಾಗಲೆಲ್ಲಾ ಬೊಬ್ಬೆ ಹೊಡೆಯುತ್ತವೆ. ಕೆಲವು ವಾಹಿನಿಗಳಂತೂ ಸುದ್ದಿ ಹಳಸಿದ ಮೇಲೂ ತಾವೇ ಈ ಸುದ್ದಿಯನ್ನು ಮೊದಲು ಪ್ರಸಾರ ಮಾಡಿದ್ದು ಎಂದು ದಿನಗಟ್ಟಲೆ ಹೇಳಿಕೊಳ್ಳುತ್ತವೆ, ಕೊರೆಯುತ್ತವೆ ಮತ್ತು ಬೆನ್ನು ತಟ್ಟಿಕೊಳ್ಳುತ್ತವೆ ಕೂಡಾ.

ಆದರೆ ಸುದ್ದಿಗಳನ್ನು ಶೀಘ್ರವಾಗಿ ನೀಡುವುದರಲ್ಲಿ ಪ್ರಾದೇಶಿಕ ವಾಹಿನಿಗಳು ಎಂದೂ ಹಿಂದೆ ಬಿದ್ದಿಲ್ಲ. ಚುನಾವಣಾ ಫಲಿತಾಂಶದ ಸಮಯದಲ್ಲಿ ಯಾವಾಗಲೂ ಪ್ರಾದೇಶಿಕ ವಾಹಿನಿಗಳೇ ಮುಂದೆ ಇರುತ್ತವೆ. ಇತ್ತೀಚೆಗಿನ ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಸಮಯದಲ್ಲಿ ಇದು ವ್ಯಕ್ತವಾಗಿದೆ. ಭಾರತೀಯ ಕ್ರಿಕೆಟ್ ತಂಡದ ತರಬೇತುದಾರರನ್ನು ನೇಮಿಸುವ ದಿನ ರಾಷ್ಟ್ರೀಯ ವಾಹಿನಿಗಳು ಕ್ರಿಕೆಟ್ ಕೋಚ್‌ನ ಹೆಸರನ್ನು ಸಧ್ಯದಲ್ಲಿಯೇ, ಕೆಲವು ಕ್ಷಣಗಳಲ್ಲಿ ಪ್ರಕಟಿಸಲಾಗುವುದು ಎಂದು ಹೇಳುತ್ತಿರುವಾಗಲೇ, ಪ್ರಾದೇಶಿಕ ವಾಹಿನಿಗಳು, ಅನಿಲ್ ಕುಂಬ್ಳೆಯನ್ನು ಕೋಚ್ ಆಗಿ ನೇಮಿಸಲಾಗಿದೆ ಎಂದು ಪ್ರಕಟಿಸಿ ಆ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆರಂಭ ಮಾಡಿದ್ದವು. ಕೆಲವು ಸಂದರ್ಭಗಳಲ್ಲಿ ಪ್ರಾದೇಶಿಕ ವಾಹಿನಿಗಳು ಸ್ವಲ್ಪ ಹಿಂದೆ ಇರಬಹುದು. ಆದರೆ, ಸುದ್ದಿಗಳ ಶೀಘ್ರ ಸಂಗ್ರಹ ಮತ್ತು ಪ್ರಸಾರದಲ್ಲಿ ಬಲಿಷ್ಠ ರಾಷ್ಟ್ರೀಯ ವಾಹಿನಿಗಳಿಗೆ ತಮ್ಮ ಸೀಮಿತವಾದ ಮೂಲಭೂತ ಸೌಕರ್ಯ, ಹಣಕಾಸು ಬೆಂಬಲದ ಹೊರತಾಗಿಯೂ ತುರುಸಿನ ಸ್ಪರ್ಧೆ ನೀಡುತ್ತಿರುವುದು ಪ್ರಶಂಶನೀಯ.

–ಡಾ. ಅನಿಕೇತ್ ಶರ್ಮಾ, ಬೆಂಗಳೂರು

## ಕನ್ನಡ ಶಬ್ದಕ್ಕೆ ಬರವೇ?

'ಕಲರ್ಸ್' ಕನ್ನಡದಲ್ಲಿ ಪ್ರಸಾರವಾಗುವ 'ಕಿನ್ನರಿ' ಧಾರಾವಾಹಿಯಲ್ಲಿ ಕನ್ನಡದಲ್ಲಿ ಸುಲಭಕ್ಕೆ ತರ್ಜುಮೆ ಯಾಗುವಂತಹ ಶಬ್ದಗಳಿಗೆ ಬದಲಾಗಿ ಆಂಗ್ಲ ಭಾಷೆಯ ಶಬ್ದಗಳನ್ನು ಉಪಯೋಗಿಸುತ್ತಾರೆ. ಸುಧಾ ಚಂದ್ರಾ ಪಾತ್ರಧಾರಿಗಳು ಮಕ್ಕಳನ್ನು ಶಾಲೆಗೆ ಬಿಟ್ಟು ಬಂದ ಮೇಲೆ ಫ್ರೆಷ್ ಆಗಿ ಬನ್ನಿ ಎನ್ನುತ್ತಾರೆ. ಹಾಗೆಯೇ ಇನ್ನಿತರ ಪಾತ್ರಗಳು ಸಹಿತ 'ಚಾಟಿಂಗ್ ಹೋಗೋಣ', 'ಮಿಸ್ ಮಾಡಕೋತಾ ಇದ್ದೀನಿ', 'ಫಾಲೋ ಮಾಡುತ್ತಿದ್ದಾರೆ', 'ಸಿರಪ್ ಕುಡಿತಿದ್ದೀನಿ'... ಯಾಕೆ ಹೀಗೆ? ಸುಲಭವಾಗಿ ಕನ್ನಡ ಭಾಷೆಯಲ್ಲಿಯೇ ತರ್ಜುಮೆ ಮಾಡಬಹುದಲ್ಲ. ಯಾಕೆ ಈ ಆಂಗ್ಲ ಭಾಷೆಯ ಶಬ್ದಗಳನ್ನು ಬಳಸುತ್ತಾರೆ. ಈ ವ್ಯಾಮೋಹ ಯಾಕೆ?

–ಶಿವಕುಮಾರ ಕೊ.ಬಣಗಾರ, ಬಾಗಲಕೋಟೆ

## ಸಂಭವಾಮಿ ಯುಗೇ ಯುಗೇ!

ಸಂಭವಾಮಿ ಯುಗೇ ಯುಗೇ ಎಂಬುದು ಭಗವದ್ಗೀತೆಯಲ್ಲಿ ಬರುವ ಅದ್ಭುತ ಸಾಲು. ಇದಕ್ಕೆ ಅರ್ಥಗರ್ಭಿತವಾದ ಸ್ಥಾನವಿದೆ. ಆದರೆ ಇಂದು ಧಾರಾವಾಹಿಗಳಲ್ಲಿ ಈ ಸಾಲನ್ನು ಎಲ್ಲೆಲ್ಲಿ ಬೇಕೋ ಅಲ್ಲೆಲ್ಲಾ ಬಳಸುತ್ತಿದ್ದಾರೆ. ಇದರಿಂದ ಅದರ ನಿಜವಾದ ಅರ್ಥವನ್ನೇ ಮರೆಮಾಚುವಂತೆ ಕಾಣುತ್ತದೆ. ಧಾರಾವಾಹಿಯ ನಾಯಕನ ನಡಿಗೆಗೆ, ಖಳನಾಯಕನ ಪ್ರವೇಶಕ್ಕೆ ಈ ಸಾಲುಗಳನ್ನು 'ಹಿನ್ನೆಲೆ ಸಂಗೀತವಾಗಿ' ಬಳಸುತ್ತಿದ್ದಾರೆ. ಒಂದು ಧಾರಾವಾಹಿ ಇವೆಲ್ಲಕ್ಕಿಂತಲೂ ಮುಂದೆ ಹೋಗಿ ಒಬ್ಬ ಮಗ ತಂದೆಗೆ ತಾನು ಪ್ರೀತಿಸುವುದನ್ನು ಹೇಳುವಾಗಲೂ ಈ ಸಾಲುಗಳನ್ನು ಹಿನ್ನೆಲೆ ಸಂಗೀತವಾಗಿ ಬಳಸುವುದನ್ನು ನಾನು ನೋಡಿದ್ದೇನೆ. ಇದನ್ನು ನಿಲ್ಲಿಸಬೇಕು.

–ಸ್ವಾಗತ ಎಸ್.ಪಿ., ಜಯಪುರ

## ವಿಕೃತ ಮನೋಭಾವ

ಕಲರ್ಸ್ ಕನ್ನಡದ ಪುಟ್ಟಗೌರಿ ಮದುವೆ, ಕುಲವಧು ಹಾಗೂ ಅಗ್ನಿ ಸಾಕ್ಷಿ ಧಾರಾವಾಹಿಗಳನ್ನು ತಕ್ಷಣದಿಂದ ನಿಲ್ಲಿಸಲು ಕೋರುತ್ತೇನೆ. ಕಾರಣ ಮಹೇಶನಂತಹ ಮಹಾಸುಳ್ಳುಗಾರ, ಸಾಗರಿಯಂತಹ ಮನೆಹಾಳಿ, ಗೌರಿ ಹಾಗೂ ಸನ್ನಿಧಿ (ಅಗ್ನಿಸಾಕ್ಷಿ) ಯಂತಹ ಪೆದ್ದುಗಳಿಂದ ಸಮಾಜಕ್ಕೆ ಒಳ್ಳೆಯ ಸಂದೇಶ ಸಿಗುತ್ತಿಲ್ಲ. ಕುಲವಧು ಧಾರಾವಾಹಿಯ ಕಾಂಚನಳಂತಹ ನಯವಂಚಕಿ ಹಾಗೂ ಪಿತೂರಿ ಮಾಡುವ ಅಜ್ಜಿ, ಧನ್ಯಳಂತಹ ಶತಮೂರ್ಖ ಪಾತ್ರಗಳು ಅತಿ ಆಯಿತು ಅನ್ನಿಸುತ್ತದೆ.

ಟಿ.ವಿ. ಇರುವುದು ಒಳ್ಳೆಯ ಹಾಗೂ ಸೌಹಾರ್ದತೆ ನೀಡುವ ಕಾರ್ಯಕ್ರಮಗಳಿಗಾಗಿ. ಈ ರೀತಿಯ ವಿಕೃತ ಮನೋಭಾವವನ್ನು ಬೆಳೆಸುವ ವಾಹಿನಿಯಾಗಬಾರದು.

–ಆನಂದ ಕೃಷ್ಣರಾವ್ ನಾಯಕ್, ಬೆಂಗಳೂರು

## ಡ್ರಾಮಾ ಜೂನಿಯರ್ಸ್

ಝೀ ಟಿವಿ ಕನ್ನಡ ಚಾನೆಲ್‌ನವರು ಪ್ರತಿ ಶನಿವಾರ ಹಾಗೂ ಭಾನುವಾರ ಪ್ರಸಾರ ಮಾಡುತ್ತಿರುವ 'ಡ್ರಾಮಾ ಜೂನಿಯರ್ಸ್' ಮಕ್ಕಳ ಪ್ರತಿಭೆಯನ್ನು ಗುರ್ತಿಸಿ, ಪ್ರತಿಭೆಯನ್ನು ಪ್ರೋತ್ಸಾಹಿಸುತ್ತಿರುವ ಒಂದು ಉತ್ತಮ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಮಕ್ಕಳ ಅಭೂತಪೂರ್ವ ಅಭಿನಯ ನೋಡಿ ಮನ ತುಂಬಿಬಂತು. ಕೆಲವೊಂದು ಬೇಸರದ ಕಾರ್ಯಕ್ರಮಗಳನ್ನು ಟಿ.ವಿ.ಯಲ್ಲಿ ನೋಡಿ ನೊಂದಿರುವವರೂ ಸಹ ಈ ವಿಶೇಷ ಕಾರ್ಯಕ್ರಮ ನೋಡಿ ಆನಂದಿಸಬಹುದು. ತಂದೆ–ತಾಯಂದಿರು ತಮ್ಮ ಮಕ್ಕಳಿಗೆ ಈ ಕಾರ್ಯಕ್ರಮ ನೋಡಲು ಹೇಳಬೇಕು.

ಸಾಮಾಜಿಕ, ಸಮಸ್ಯೆಗಳು, ಸಾಮಾಜಿಕ ಜವಾಬ್ದಾರಿಗಳು, ಮೌಢ್ಯಗಳು ಮೊದಲಾದ ವಿಚಾರಗಳ ಬಗ್ಗೆ ಇಲ್ಲಿ ಮಕ್ಕಳು ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರ ಮನ ಗೆದ್ದಿದ್ದಾರೆ, ಭ್ರಷ್ಟಾಚಾರ, ಜಾತೀಯತೆ, ಮನಮಿಡಿಯುವ ಪೌರಾಣಿಕ ಸನ್ನಿವೇಶಗಳು, ಇನ್ನಿತರ ಕೆಲವು ವಿಷಯಗಳ ಬಗ್ಗೆಯೂ ಡ್ರಾಮಾ ಜೂನಿಯರ್ಸ್‌ನಲ್ಲಿ ಆದ್ಯತೆ ಕೊಡಬೇಕಾಗಿದೆ. ವಿಶೇಷವಾಗಿ ತೀರ್ಪುಗಾರರು ಮಕ್ಕಳಿಗೆ ನೋವಾಗದ ಹಾಗೆ ಎಲಿಮಿನೇಷನ್ ಮಾಡದೆ ಹೆಚ್ಚು ತರಬೇತಿ ಪಡೆದು ತಮ್ಮ ಪ್ರತಿಭೆ ಹೆಚ್ಚಿಸಿಕೊಳ್ಳಬೇಕೆಂದು ಹೇಳುವುದು ಮೆಚ್ಚುವಂತಹುದು. ಈ ವೇದಿಕೆಯ ಮಕ್ಕಳು ಮುಂದೊಂದು ದಿನ ಯಶಸ್ವೀ ಕಲಾವಿದರಾಗುವುದರಲ್ಲಿ ಸಂಶಯವಿಲ್ಲ, ಎಲ್ಲಾ ಮಕ್ಕಳಿಗೂ ಅಭಿನಂದನೆಗಳು.

–ಬಸವರಾಜು, ಬಿ.ಎಸ್., ಚನ್ನಪಟ್ಟಣ, ಸಿ.ಎಸ್. ರಾಜೇಂದ್ರ, ಮೈಸೂರು, ಬಿಲ್ಲೇಶ್ವರ ಅಚ್ಚು, ಹುಂಚ, ಎಸ್.ವಿ. ಕಮಲಮ್ಮ, ಬೆಂಗಳೂರು, ವಿ.ಎಸ್. ಸರಸ್ವತಿ ಅಶ್ವತ್ಥನಾರಾಯಣ, ಕಳಸ, ಮೂಡಿಗೆರೆ

